ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಉಪಸ್ಥಿತರು:- ವೆಂಕನಗೌಡ ಆರ್ ಪಾಟೀಲ್ , ತಹಶೀಲ್ದಾರರು ಹೂವಿನಹಡಗಲಿ.

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| 1)ಹೊಟ್ಟಿನವರ ಹನುಮವ್ವ ಗಂಡ ಲೇಟ್ ಮೈಲಾರಪ್ಪ, ತುಂಬಿನಕೇರಿ<br>2) ಎಂ ಹೆಚ್ ಪರುಶುರಾಮಪ್ಪ ತಂದೆ ಲೇಟ್ ಗುಡ್ಡಪ್ಪ ಹೂವಿನಹಡಗಲಿ. 9900298925 | ಹೆಚ್ ಹಾಲವ್ವ ಗಂಡ ಮಲ್ಲಪ್ಪ, ಹಿರೇಹಡಗಲಿ |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಕೊಟ್ನಿಕಲ್ | 129B/3 129C/3 | 0.45 0.49 |

ಪ್ರಸ್ತಾವನೆ:-

ಮೇಲಿನ ದಾವಾ ಜಮೀನನ್ನು ವಾದಿಯು ಕ್ರಯ ಪತ್ರ ಸಂಖ್ಯೆ 1367/2015-16 ದಿನಾಂಕ 10/07/2015 ರಂತೆ )ಹೊಟ್ಟಿನವರ ಹನುಮವ್ವ ಗಂಡ ಲೇಟ್ ಮೈಲಾರಪ್ಪ, ತುಂಬಿನಕೇರಿ ರವರಿಂದ ಎಂ ಹೆಚ್ ಪರುಶುರಾಮಪ್ಪ ತಂದೆ ಲೇಟ್ ಗುಡ್ಡಪ್ಪ ಹೂವಿನಹಡಗಲಿ ರವರು ಕ್ರಯಕ್ಕೆ ಪಡೆದಿರುತ್ತಾರೆ. ಈ ಹಿನ್ನಲೆಯಲ್ಲಿ ನೊಂದಣಿ ಜೆ ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮ ಲೆಕ್ಕಾದಿಕಾರಿಗಳು ಹಡಗಲಿ ರವರು ನಮೂನೆ 21ನ್ನು ಜಾರಿಮಾಡಿದಾಗ ದಿನಾಂಕ 04/08/2015 ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೆಚ್ 02/2015-16 ದಿನಾಂಕ 30/07/2015 ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದು 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಹಾಗೂ ಪ್ರತಿವಾದಿಗಳಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 28/07/2016 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಯಾದ ಹೊಟ್ಟಿನವರ ಹನುಮವ್ವ ಗಂಡ ಲೇಟ್ ಮೈಲಾರಪ್ಪ, ತುಂಬಿನಕೇರಿ ರವರು ಕೊಟ್ನಿಕಲ್ ಗ್ರಾಮದ ಸರ್ವೇ ನಂಬರ 129B/3 (ವಿ) 0.45 ಮತ್ತು 129C/3 (ವಿ) 0.49 ಎಕರೆ ಜಮೀನನ್ನು ಎಂ ಹೆಚ್ ಪರುಶುರಾಮಪ್ಪ ತಂದೆ ಲೇಟ್ ಗುಡ್ಡಪ್ಪ ರವರಿಗೆ ಉಪನೊಂದಾಣಾಧಿಕಾರಿಗಳ ಹಡಗಲಿ ರವರಲ್ಲಿ ನೂಂದಣಿ ದಸ್ತಾವೇಜು ಸಂಖ್ಯೆ 1367/2015-16 ದಿನಾಂಕ 10/07/2015ರ ಪ್ರಕಾರ ಖರೀದಿ ಕ್ರಯಕ್ಕೆ ಪಡೆದಿರುತ್ತೇನೆ, ಎಂದು ತಿಳಿಸಿ ಅದರಂತೆ ತನ್ನ ಹೆಸರಿಗೆ ಪಹಣಿಯಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿ ತಮ್ಮ ವಾದವನ್ನು ತಿಳಿಸಿರುತ್ತಾರೆ

ಪ್ರತಿವಾದಿಗಳು ಶ್ರೀಮತಿ ಹೆಚ್ ಹಾಲವ್ವ ಗಂಡ ಮಲ್ಲಪ್ಪ, ಹಿರೇಹಡಗಲಿ ಅವರ ಈ ವಿವಾದಿತ ಜಮೀನಿನಲ್ಲಿ ವಾದಿಗಳ ಮನವಿಯನ್ನು ವಜಾಗೊಳಿಸಬೇಕು, ಈ ಜಮೀನಿನಲ್ಲಿ ಅವರ ಹಿಸ್ಸಾ ಇದ್ದು ಸದರಿ ಕ್ರಯದ ಬಗ್ಗೆ ನಮಗೆ ಅನ್ಯಯವಾಗಿದ್ದು, ಸದರಿ ಕ್ರಯ ನೊಂದಣಿ ಕ್ರಯ ಪತ್ರ ರದ್ದು ಮಾಡಬೇಕೆಂದು ಅರ್ಜಿದಾರರು ಹೆಸರಿಗೆ ಕ್ರಯ ನೊಂದಣಿ ಪ್ರಕಾರ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿ ಲಿಖಿತ ತಕರಾರು ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿಗಳ/ಪ್ರತಿವಾದಿಗಳ ವಾದವನ್ನು ಆಲಿಸಲಾಯಿತು. ಕರ್ನಾಟಕ ಭೂ ಕಂದಾಯ ಕಾಯ್ದೆ ಅನ್ವಯ 1964 ಕಾಲಂ 128 ರನ್ವಯ ನೊಂದಣಿ ಕ್ರಯ ಪತ್ರದ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕಂದಾಯ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಈ ಕೆಳಕಂಡ ಆದೇಶ.

**ಸಂ/ಕಂ/ಪಹಣಿ/ವಿವಾದ/18/2015-16** **ದಿನಾಂಕ:-13/10/2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ ಹಿನ್ನೆಲೆ ಕಾರಣಗಳಿಂದಾಗಿ ನೊಂದಣಿ ಕ್ರಯಪತ್ರ ಸಂಖ್ಯೆ 1367/2015-16 ದಿನಾಂಕ 10/07/2015 ಪ್ರಕಾರ ಹೊಟ್ಟಿನವರ ಹನುಮವ್ವ ಗಂಡ ಲೇಟ್ ಮೈಲಾರಪ್ಪ, ತುಂಬಿನಕೇರಿ ರವರು ಕೊಟ್ನಿಕಲ್ ಗ್ರಾಮದ ಸರ್ವೇ ನಂಬರ 129B/3 (ವಿ) 0.45 ಮತ್ತು 129C/3 (ವಿ) 0.49 ಎಕರೆ ಜಮೀನನ್ನು ಎಂ ಹೆಚ್ ಪರುಶುರಾಮಪ್ಪ ತಂದೆ ಲೇಟ್ ಗುಡ್ಡಪ್ಪ ರವರಿಗೆ ಗೆ ಕ್ರಯ ನೀಡಿದ್ದು ಕ್ರಯ ನೊಂದಣಿ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 13/10/2016 ಬಹಿರಂಗ ನ್ಯಾಯಲದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು:

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.